**<u>ಅಸಲು ದಾವಾ ಸಂಖ್ಯೆಃ 47 /2022</u> ಪಿ.ಡಬ್ಲೂ -1**

ದಿನಾಂಕಃ 10.03.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ-</u>**

ನಾನು ವಾದಿಯ ವಿಶೇಷ ಅಧಿಕಾರ ಹೊಂದಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

1. ದಿಃ 06-11-2012 ರ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ ವಾದಿಯ ಪ್ರತಿವಾದಿ 2 ರಿಂದ 8 ರವರ ಸಹಿಗಳನ್ನು ಕ್ರಮವಾಗಿ ನಿಪಿ1(ಎ) ರಿಂದ ನಿಪಿ1(ಹೆಚ್) ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಸಾಕ್ಷಿದಾರರ ಸಹಿಗಳನ್ನು ನಿಪಿ1(ಐ) ರಿಂದ (ಜೆ) ಎಂದು,
2. ನಿಪಿ 1 ರಲ್ಲಿ ಸಾಕ್ಷಿಯ ನೋಡಿ ಗುರುತಿಸಿದ ದಿಃ 14.11.2012 ಮತ್ತು ದಿಃ 27.05.2013 ರ ಹಿಂಬರಹಗಳನ್ನು ಕ್ರಮವಾಗಿ ನಿಪಿ 1(ಕೆ) ಮತ್ತು ನಿಪಿ1(ಎನ್),
3. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಒಂದು ಆರ್ ಟಿ ಸಿ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು,
4. ದಿಃ 20.06.2015 ರ ನೋಟೀಸ್ ನ ಕಛೇರಿ ಪ್ರತಿಯನ್ನು ಒಂದು ಅಂಚೆ ರಸೀದಿಯೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ಮತ್ತು 4 ಎಂದು,
5. ದಿಃ 03.09.2021 ರ ನೋಟೀಸ್ ನ ಕಛೇರಿ ಪ್ರತಿಯನ್ನು 8 ಅಂಚೆ ರಸೀದಿ ಮತ್ತು 6 ಅಂಚೆ ಸ್ವೀಕೃತಿಗಳೊಂದಿಗೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ರಿಂದ ನಿಪಿ 19 ಎಂದು,
6. 2 ಮತ್ತು 3 ನೇ ಪ್ರತಿವಾದಿಗಳಿಗೆ ಜಾರಿಯಾಗದೇ ಹಿಂತಿರುಗಿದ ನೋಟೀಸ್ ನ ಅಂಚೆ ಲಕೋಟೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-20 ಮತ್ತು ನಿಪಿ 21 ಎಂದು,
7. ದಿಃ 14.09.2021 ರಂದು ಪ್ರತಿವಾದಿಗಳು ನಮಗೆ ಕಳುಹಿಸಿದ್ದ ರಿಪ್ಲೈ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-22 ಎಂದು,
8. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2019-2020 ರಿಂದ 2021-2022 ರವರೆಗಿನ ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 23 ರಿಂದ ನಿಪಿ 25 ಎಂದು,
9. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ಎಂ ಆರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ 26 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳು ಗೈರು ಹಾಜರಿರುವುದ್ದರಿಂದ ಮುಂದುಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇದೆ**

ಸಹಿ/-

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ**